Regd No. M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 137] ಸೋಮವಾರ 27—1—47 [ಬಿಡಿ ಪ್ರತಿ 6 ಪೈ

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ — ಆರೋಗ್ಯ ಲಾಭವುಂಟು, ವ್ಯವಹಾರದಲ್ಲಿ ಉತ್ತೇಜನ ಹಾಗೂ ಅಭಿವೃದ್ಧಿಗಳುಂಟು, ಕಾರ್ಯ ತತ್ಪರತೆಯುಂಟು. ಧನಿಕರ ಸಹಾಯವುಂಟು

ವೃಷಭ — ಹಣದ ತೊಡಕು ದೂರವಾಗುವಂತಿದೆ. ವ್ಯವಹಾರದ ತೊಂದರೆಗಳು ನಿವಾರಣೆಯಾಗುವುವು ಮನಸ್ಸು ಸಮಾಧಾನದಲ್ಲಿರುತ್ತದೆ.

ಮಿಥುನ — ಶತೃಪೀಡೆಯ ಭಯವಿದೆ. ಕೋಪವನ್ನು ಹೊರಗೆಡವದೆ ಶಾಂತತೆಯಿರಿದ್ದಲ್ಲಿ ಉತ್ತಮ. ನಿದ್ರಾನಾಶವಾಗಬಹುದು.

ಕರ್ಕಾಟಕ — ದುರಾಶೆಯನ್ನುಂಟು ಮಾಡುವ ಕಾರ್ಯಗಳಿಗೆ ಕೈ ಹಾಕಿದ್ದಲ್ಲಿ ನಷ್ಟವನ್ನು ಸಂಭವಿಸಬೇಕಾಗಿ ಒದಗಬಹುದು. ಜಾಗ್ರತೆ.

ಸಿಂಹ — ಉತ್ಸಾಹವರ್ಧಕವಾದ ವಾರ ಜಯ ಪ್ರಾಪ್ತಿಯಾಗುವ ವಾರ, ಧನ ಲಾಭ ವಿರುತ್ತದೆ. ವ್ಯವಹಾರಧಲ್ಲಿ ಅನುಕೂಲವುಂಟು

ಕನ್ಯ — ಶರೀರ ಸ್ಥಿತಿ ನೆಟ್ಟಗಿರುವುದಿಲ್ಲ. ವ್ಯವಹಾರದಲ್ಲಿ ವಿಘ್ನಗಳು ಬಂದೊದಗುವುವು, ಮನಸ್ಸು ಉತ್ಸಾಹವಾಗಿರುವುದಿಲ್ಲ

ತುಲ — ಮನೋಚಿಂತೆ ದೇಹದಲ್ಲಿ ಅಸ್ವಸ್ಥತೆ ವ್ಯವಹಾರದಲ್ಲಿ ಕ್ಲೇಶ ಕಷ್ಟಗಳು ಕಾಣಬರುತ್ತವೆ

ವೃಶ್ಚಿಕ — ಕೀರ್ತಿಯನ್ನುಂಟು ಮಾಡುವ ವಾರ. ಆರೋಗ್ಯವು ಚನ್ನಾಗಿರುತ್ತದೆ ಕೈಗೊಂಡ ಕಾರ್ಯಗಳಲ್ಲಿ ಜಯ ಮತ್ತು ಲಾಭಗಳುಂಟು. ಹಿರಿಯರಿಂದ ಉತ್ತೇಜನವು ಲಭಿಸುವುದು

ಧನಸ್ಸು — ಕಾಲವನ್ನು ಸದುಪಯೋಗಗೊಳಿಸಿಕೊಳ್ಳಿರಿ. ಖರ್ಚು ಹೆಚ್ಚು ಸಂಸಾರದಲ್ಲಿ ಚಿಂತೆಯುಂಟಾಗುತ್ತದೆ,

ಮಕರ — ಆರೋಗ್ಯನಿರುವುದಿಲ್ಲ ಮನಸ್ಸಿಗೆ ಶಾಂತತೆ ಇರುವುದಿಲ್ಲ. ಕೆಲಸ ಹೆಚ್ಚು ತಾಪತ್ರಯ ಹೆಚ್ಚು,

ಕುಂಭ— ಹೊಗಳುಭಟರ ಮಾತುಗಳಿಗೆ ಮರಳು ಹೋಗಬೇಡಿ. ಅನಾರೋಗ್ಯದ ಭಯವಿದೆ, ಮನಸ್ಸು ಸಂತೋಷದಿಂದಿರುವುದಿಲ್ಲ. ಖರ್ಚು ಹೆಚ್ಚು ಸಂಸಾರದಲ್ಲಿ ಚಿಂತೆಗಳು.

ಮೀನ — ಮನಸ್ಸು ಸಂತೋಷದಿಂದಿರುತ್ತದೆ. ಆರೋಗ್ಯ ಚನ್ನಾಗಿರುತ್ತದೆ. ನಿಮ್ಮ ಕೆಲಸಗಳೆಲ್ಲವೂ ಅನುಕೂಲವಾಗಿ ನಿರ್ವಿಘ್ನವಾಗಿ ನಡೆಯುವುದು

ಸತ್ತವನು ಬದುಕಿದ

ಕಾಶಿ ಜ 23 — ಸತ್ತಿದ್ದವನು ಬದುಕಿದ ಕತೆ ಕೇಳಿ ಬಂದಿದೆ. ರಾಂನಗರದಿಂದ ಒಬ್ಬ ಹಿಂದೂವಿನ ಶವವು ಸಂಸ್ಕಾರಕ್ಕೆ ತರಲಾಯಿತು. ಈ ಸಂದರ್ಭದಲ್ಲಿ ಅವನ ಬಾಯಿಗೆ ಗಂಗಾಜಲ ಹೂಯ್ದೊಡನೆ ಅವನು ಕಣ್ಣು ಬಿಟ್ಟನೆಂದೂ ನಂತರ ಚಿತೆಯಿಂದ ತೆಗೆಯಲ್ಪಟ್ಟ ಈಗ ಜೀವಂತನಾಗಿ ಆರೋಗ್ಯದಿಂದಿರುವನೆಂದೂ ಹೇಳಲಾಗಿದೆ.

ಹೆಂಗಸು ಹೆಂಗಸರ ಮದುವೆ

ಬ್ರಿಟನ್ನಿನಲ್ಲಿಯ ಕಥೆ ಇದು. ಎಲ್ಸಿ ಮೆಯಂಗ್ ಎಂಬ 26 ವರ್ಷದ ಹುಡುಗಿ ಪುರುಷರಂತೆ ಕ್ರಾಫ್ ಮಾಡಿಕೊಂಡು ಉಡುಪು ಧರಿಸುತ್ತಿದ್ದು 26 ವಯಸ್ಸಿನ ಪಾರ್ವಿಕ್ ಫೈರಿನ ಹುಡುಗಿಯನ್ನು ಮದುವೆಯಾದಳು. ಇವಳಿಗೆ 9 ತಿಂಗಳು ಸಜಾ ವಿಧಿಸಲಾಯಿತು.

ತಂತೀವಾರ್ತೆ ತಲುಪಿಸಲಿಲ್ಲ

ನವದೆಹಲಿ ಜ 24 — ಹೊಸ ವರ್ಷದ ದಿವಸ ಒಬ್ಬ ತಂತೀ ಜವಾನನ ಕೈಲಿ ಶ್ರೀ ನೆಹರೂ ಪಟೇಲ್ ಮುಂತಾದ ಪ್ರಮುಖರಿಗೆ ಕೂಡಲು 30 ಟೆಲಿಗ್ರಾಂಗಳನ್ನು ಕೊಡಲಾಗಿತ್ತೆಂದೂ ಅವನು ಹವಾ ಚನ್ನಾಗಿಲ್ಲದೆ ಜಿಗುಸ್ಸೆಯಿಂದ ಕಕ್ಕಸಿನ ನೀರಿರುವ ಸ್ಥಳದಲ್ಲಿ ಬಿಸಾಡಿದ್ದನೆಂದೂ ಈಗ ಹೊರಪಟ್ಟಿದೆ.

ಆಹಾರ ಇಲಾಖೆಯಿಂದ ಯೂರೊಪಿಯ್ಯ ಸಪಸ್ಯರು ಹೋಗುವರು

ಈಗಿನ ಚಾಲ್ತೀ ವರ್ಷದ ಅಂತ್ಯದೊಳಗೆ ಭಾರತ ಸರಕಾರದ ಆಹಾರ ಇಲಾಖೆಯುಲ್ಲಿರುವ ಎಲ್ಲಾ ಯೂರೋಪಿಯ್ಯ ಸದಸ್ಯರನ್ನು ತೆಗೆದು ಹಾಕುವ ನಿರ್ಧಾರವಾಗಿದೆ.

❋

ಕ್ವಿಬೆಕ್ ಕೋರ್ಟಿಗೆ ಒಬ್ಬ ಲಾಯರು ನೀಲೀ ಶರಟು ಹಾಕಿಕೊಂಡು ಬಂದನು. ಯೋಗ್ಯರೀತಿಯ ಉಡುಪಲ್ಲವೆಂದು ಕೋರ್ಟಿಗೆ ಪ್ರವೇಶ ದೊರೆಯಲಿಲ್ಲ.

ಲೀಗರ ಆಜ್ಞೋಲ್ಲಂಘನೆ

ಲಾಹೋರು ಜ 26 — ಪಂಜಾಬಿನ ಸಾರ್ವಜನಿಕಾ ರಕ್ಷಣಾ ಮಸೂದೆಯನ್ನು ಉಲ್ಲಂಘಿಸಿ ಲೀಗಿನವರು ಮೆರವಣಿಗ ನಡೆಸಿದರು. ಹಲವು ದಸ್ತಗಿರಿಗಳಾಗಿವೆ. ಪ್ರಾಂತ್ಯದಲ್ಲೆಲ್ಲಾ ಆಜ್ಞೋಲ್ಲಂಘಿಸಲು ಲೀಗು ತೀರ್ಮಾನಿಸಿದೆ.

ಚಿತ್ರ - ವಿಚಿತ್ರ

ಸಮುದ್ರದ ಮೇಲೆ ರೇಡಿಯೋ ಧ್ವನಿ ನಡೆಸಿ ಪೆಟ್ರೋಲು ಉತ್ಪತ್ತಿ ಮಾಡಬಹುದೆಂದು ವೈಜ್ಞಾನಿಕ ನಿರೀಕ್ಷಣೆ.

ಮಲಬಾರಿನಲ್ಲಿ ಹುಡುಗರ ತಲೆಗೆ ಬಳಿಯಲು ಕೊಬ್ಬರಿಯಣ್ಣೆ ಅಭಾವದಿಂದ ಅವರ ಕಪ್ಪು ಕೂದಲು ಕೆಂಬಣ್ಣಕ್ಕೆ ತಿರುಗುತ್ತಿದೆ

ಈರುಳ್ಳಿ ಸಕೋಡಾ ಸೇವನೆಯಿಂದ ದೇವರು ಮನುಷ್ಯನಿಂದ ದೂರವಾಗುತ್ತಾನೆಂದು ಸ್ವಾಮಿ ಶಿವಾನಂದರು ಹೇಳುತ್ತಾರೆ.

ನಾರ್ವೇಕಿನ ಜೇಮ್ಸ್ ಬಿನ್ಸ್‌ಲ್ ಎಂಬಾತನು 7 ವರ್ಷಗಳಿಂದ ಮೂರ್ಛೆರೋಗದಿಂದ ನರಳುತ್ತಿದ್ದನು. ಕಳೆದ ತಿಂಗಳಲ್ಲಿ ಅವನನ್ನು ಒಂದು ಕುದುರೆಯು ಒದೆಯಿತು- ನಂತರ ಅವನ ಮೂರ್ಛೆರೋಗ ನಿವಾರಣೆಯಾಗಿದೆ !

ಸಾಗರಕಟ್ಟೆ ರೈಲ್ವೆ ಸ್ಟೇಷನ್ ಬಳಿ ಮುಸ್ಲಿಂ ಕುಟುಂಬದ ಸ್ತ್ರೀಯೊರ್ವಳಿಗೆ ರೈಲು ಹತ್ತುವಾಗ ಏಟು ಬಿದ್ದು ಆಕೆಯ ಪರಿಸ್ಥಿತಿ ತುಂಬಾ ಶೋಚನೆಯವಾಗಿದೆ.

ಮೈಸೂರು ಜ 27 — ನಿನ್ನೆಯ ದಿವಸ ರಾತ್ರೆ ಅರಸೀಕೆರೆಯಿಂದ ಮೈಸೂರಿಗೆ ರೈಲು ಬರಲೇ ಇಲ್ಲ. ನಿನ್ನೆ ದಿವಸ ಮಧ್ಯಾಹ್ನ ಮೈಸೂರು ಬಿಟ್ಟು ಹೋದ ಗುಡ್ಸ್ ರೈಲು ಅರಸೀಕರೆ ಬಳಿ ಬೋರಲಾದುದೇ ಕಾರಣ.

ದೇವ ಸಭೆ

ಮಹರ್ಷಿಗಳೂ ದಿಕ್ಪಾಲಕರೂ ದಿವ್ಯ ಜ್ಞಾನ ಸಂಪನ್ನರೆಂದ ದೇವ ಮುನಿಗಳೂ ಗಂಧರ್ವರಾಜರೂ ಬೃಹಸ್ಪತಿಯೂ ಇವರೆಲ್ಲರೂ ದೇವಸಭೆಯಲ್ಲಿ ಆಸೀನರಾಗಿದ್ದ ಕಾಲದಲ್ಲಿ —

ಸಕಲ ಸಾಹಿತ್ಯ ನಿಧಿಯು ಸ್ವರ್ಗಕ್ಕೆ ಬಂದ, ಸುಗುಣ ಸೌಜನ್ಯ ನಿಧಿಯು ಸ್ವರ್ಗಕ್ಕೆ ಬಂದ, ಸರ್ವಜನರನ್ನೂ ತ್ಯಜಿಸಿ ಸ್ವರ್ಗಕ್ಕೆ ಬಂದ ಎಂಬ ವಿನೋದ ನಾದವು ದೇವೇಂದ್ರನ ಸಭೆಯಲ್ಲಿದ್ದವರಿಗೆ ಕೇಳಿ ಬಂದಿತು.

ಆಗ ದೇವೇಂದ್ರನು ಸಭಾಸದರನ್ನು ಕುರಿತು ಮುನಿವರ್ಯರೇ ! ಸಭಾಸದರೇ ಈ ವಿಷಯವೇನು ? ಎಂದು ಪ್ರಶ್ನಿಸಲು ನಾರದನು, ಸಹಸ್ರ ವಿಲೋಚನನೇ ಕೇಳು— ಕಾಶೀ ವಿದ್ಯಾ ಪೀಠ ಸ್ಥಾಪಕನೂ ವೇದೋಕ್ತ ಧರ್ಮ ಪ್ರಿಯನೂ ಆದ ಮದನಮೋಹನ ಮಾಳವ್ಯ ಪಂಡಿತನು ಭರತಖಂಡವನ್ನು ಜಟ್ಟು ಅಮರ ಸಭೆಗೆ ಬರುತ್ತಿದ್ದಾನೆ ಎಂದು ಉತ್ತರವನ್ನೀಯುವಷ್ಟರಲ್ಲಿಯೇ —

ದೇಶ ಸೇವಾದುರಂಧರ ದೀಕ್ಷಿತನಿಗೆ ಜೈ, ದಿಕ್ಪ್ರದರ್ಶಿತ ವಿದ್ಯೋಪದೇಶಕನಿಗೆ ಜೈ , ಧೈರ್ಯ ಸದ್ಗುಣ ಸತ್ಯ ಪ್ರದರ್ಶಕನಿಗೆ ಜೈ , ಮದನಮೋಹನ ಮಾಳವ್ಯ ಪಂಡಿತನಿಗೆ ಜೈ , ಎಂಬ ಜಯಕಾರನಾದಗಳು ಸಭೆಯ ಮೂಲೆ ಮೂಲೆಯಲ್ಲಿಯೂ ಕೇಳಲಾರಂಭಿಸಿತು.

ಆಗ ದೇವೇಂದ್ರನು ಮಾಳವ್ಯರನ್ನು ಉಚಿತ ರೀತಿಯಲ್ಲಿ ಬರಮಾಡಿಕೊಂಡು ಕ್ಷೇಮ ಸಮಾಚಾರಗಳನ್ನು ಕೇಳಿ ಭೂದೇವೇಂದ್ರನೇ ! ಕೆಲವು ದಿನಗಳ ಕೆಳಗಿನಿಂದ ನಡೆಯುತ್ತಿರುವ ಶ್ರೀ ಜವಹರಲಾಲರ ನಾಯಕತ್ವವುಳ್ಳ, ಭಾಧ್ಯತಾಯುತ ಸ್ವಾತಂತ್ರ್ಯ ನಾಟಕವು ಹೇಗೆ ನಡೆಯುತ್ತಿದೆ ? ' ಎಂದು ಪ್ರಶ್ನಿಸಿದನು. ಆಗ ಮಾಳವ್ಯರು ' ದೇವೇಂದ್ರನೇ ಬಹಳ ಕ್ರಮ ಬದ್ಧವಾಗಿ ನಡೆಯುತ್ತಿದೆ. ಜನರಂಜನೀಯವಾಗಿದೆ. ಆದರೆ ಕುಚ್ಚಿತರಾದ ರಾಜ ತಂತ್ರ ಕುಶಲರು ಕೆಲರು ಮತಕಲಹಗಳನ್ನು ಪ್ರಜ್ವಲಗೊಳಿಸಿ ಭಾರತ ಸ್ವಾತಂತ್ರ್ಯವನ್ನು ಭಸ್ಮಮಾಡಲೆಳಸಿರುವರು. ವಿಧಿ ನಿರ್ಣಯವು ಹೇಗಿರುವದೋ ಏನೋ ' ಎಂದು ಸುಡಿದು ಸುಮ್ಮನಾದನು. ಆಗ ದೇವೇಂದ್ರನು ' ಆರ್ಯ ! ವಿಚಾರಪಡಬೇಕಾಗಿಲ್ಲ ಗಾಂಧಿಜೀಯವರ ಬೆಂಬಲವಿರುವಾಗ ಭರತಖಂಡವು ಶೃಂಖಲಾಬದ್ಧವಾಗಲಾರದು. ಸರ್ವ ಸ್ವಾತಂತ್ರ್ಯವೂ ಲಭಿಸುವುದು. ಖಂಡಿತ ಎಂದು ನುಡಿದನು. (ಓಂ)

(ಆಂಧ್ರ ಲೇಖನದ ಸಾರ)

ಇವರೇ ಏನು ಗಾಂಧೀಜಿ

ಶಾಪುರ ತಾ 13 — ಶಾಪುರದಲ್ಲಿ ಗಾಂಧೀಜಿಯವರು ತಮ್ಮ ಗುಡಿಸಲಿಂದ ಜನನಿಬಿಡವಾದ ಸಂತೆಯ ಬಜಾರಿಗೆ ಹೋದರು. ಅಲ್ಲಿ ಗಾಂಧೀಜಿಯವರ ದರ್ಶನ ಪಡೆಯಲು ಜನರು ಕಿಕ್ಕಿರಿದು ನೆರೆದಿದ್ದರು. ಗಾಂಧೀಜಿಯವರು ಹೇಗಿದ್ದಾರೆ ಎಂಬ ಕಲ್ಪನೆ ಕೂಡಾ ಇಲ್ಲದ ಸಿಂಗರ ಕಡೆಗೆ ಬೆರಳು ತೋರಿಸಿ ಅವರು ಮಹಾತ್ಮರೆಂದರು. ಆದರೆ ಇತರ ಹಲವರಿಗೆ ಕೈಯಲ್ಲಿ ಬಿದಿರು ಕೋಲು ಹಿಡಿದ ಮಹತ್ಮರ ಗುರುತು ಹತ್ತಿತು. ಓರ್ವ ವಯೋವೃದ್ಧ ಮುಸಲ್ಮಾನರು ಗಾಂಧೀಜಿಯವರ ಕಡೆಗೆ ಬೆರಳು ತೋರಿಸಿ, 'ಮಹಾತ್ಮರೆಂದರೆ ಇವರೇನು ದೇಶ ಸೇವೆಯ ಕಾರ್ಯದಲ್ಲಿ ಹಲವು ವರ್ಷಗಳನ್ನು ಸವೆಯಿಸಿದ ಮಹಾ ಪುರುಷರು ಇವರೇ ' ಎಂದರು. ಗಾಂಧೀಜಿಯವರ ಜೊತೆಯಲ್ಲಿದ್ದ ಮುಸ್ಲೀಮ್ ಅಧಿಕಾರಿಗಳು ಅದನ್ನು ನೀವು ಅರಿತಿರುವುದಾದರೆ ಹೌದು ಎಂದರು.

ಒಂದ ಲಕ್ಷ ಚೀಣೀ ಬಂದಿಗಳ ಬಿಡುಗಡೆ

ಚೀನಾದಲ್ಲಿ ಹೊಸ ರಾಜ್ಯಾಂಗ ಸ್ಥಾಪಿತವಾಗುವುದಕ್ಕೆ ಮೊದಲು ಶಿಕ್ಷೆ ತರಾದ ಕಾರಾಗೃಹ ವಾಸದಲ್ಲಿದ್ದ ಒಂದು ಲಕ್ಷ ಚೀಣೀ ಬಂದಿಗಳನ್ನು ಚೀನೀ ನ್ಯಾಯಾಂಗ ಸಚಿವರು ಒಂಧಮುಕ್ತರನ್ನಾಗಿ ಮಾಡಿದ್ದಾರೆ. ಸಮರ ಅಪರಾಧಿಗಳೂ, ಲಂಚಕೋರರೂ ತತ್ಸಂಬಂಧವಾದ ಇತರ ಬಂಧಿಗಳನ್ನೂ ಬಿಡುಗಡೆ ಮಾಡಿಲ್ಲ. ಮರಣ ದಂಡನೆಯನ್ನು 15 ವರ್ಷಗಳ ಕಾರಾಗೃಹವಾಸ ಶಿಕ್ಷೆಗೂ, ಜೀವಾವಧಿ ಶಿಕ್ಷೆಯನ್ನು 10 ವರ್ಷಕ್ಕೂ ಇಳಿಸಲಾಗಿದೆ.

ಗಂಡಹೆಂಡರು ಸಂತೋಷಕೂಟದಲ್ಲಿದ್ದಾಗ ಮನೆಯಲ್ಲಿ ಭಾರೀಕಳವು

ಪ್ಯಾರಿಸ್ ಪಟ್ಟಣದಲ್ಲಿ ಒಂದು ಹೋಟಲಿನಿಂದ 160000 ಪೌಂಡುಗಳ ಬೆಲೆಬಾಳುವ ಬ್ಯಾಂಕು ನೋಟುಗಳೂ ಆಭರಣಗಳೂ ಕಳುವಾಗಿವೆ. ಆ ಆಭರಣಗಳ ಮಾಲೀಕರಲ್ಲಿ ಗಂಡನು ಅಮೆರಿಕಾ ಪಾರಿಶ್ರಾಮಿಕ ನಿಧಿ. ಹೆಂಡತಿಯು ನಟೀ ಮಣಿ ಇವರಿಬ್ಬರೂ ಸಂತೋಷ ಕೂಟದಲ್ಲಿ ಊಟಮಾಡುತ್ತಿದ್ದಾಗ ಮಲಗುವ ಮನೆಯೊಳಕ್ಕೆ ಕಳ್ಳರು ಹೊಕ್ಕು ದೋಚಿಕೊಂಡು ಹೋದರು,

ವರ್ತಮಾನ ಸಂಗ್ರಹ

ರಾಂನಾಡು — ಕಳೆದ ಶುಕ್ರವಾರ ಕಲೆಕ್ಟರವರು ಅಧ್ಯಕ್ಷತೆಯಲ್ಲಿ ಹಿಂದೂ ಮುಸ್ಲಿಂ ಶಾಂತಿ ಸಭೆ ನಡೆಯಿತು ಹಿಂದೂ ಮುಸ್ಲಿಂ ಮುಖಂಡರು ಒಂದು ಜಂಟಿ ವಿಜ್ಞಾಪನಾ ಪತ್ರ ಬರೆದು ಕಾಂಗ್ರೆಸ್ ಬಾವುಟದೊಂದಿಗೆ 5 ಜನಕ್ಕೆ ಹೆಚ್ಚಿಲ್ಲದಂತೆ ಮಸೀತಿ ಹತ್ತಿರ ವಿನಃ ಎಲ್ಲಾ ಕಡೆಗಳಲ್ಲೆಲ್ಲಾ ಹಿಂದೂಗಳು ಹೋಗಬಹುದೆಂದು ಒಪ್ಪಂದ ಮಾಡಿಕೊಂಡರು.

ನವದೆಹಲಿ ಜ 20 — ಭಾರತದ ತಾತ್ಕಾಲಿಕ ಮಂತ್ರಿಮಂಡಲದ ಮೇಲೆ ರಷ್ಯಾ ಕೈಮಾಡಲಿಲ್ಲವೆಂದು ಪಂ|| ನೆಹರು ಹೇಳಿರುವರು.

ಮಧ್ಯಪ್ರಾಂತ್ಯ ಮತ್ತು ಬೀರಾರು ಸರಕಾರದ ಮಂತ್ರಿ ಶ್ರೀ ಗೋಖಲೆಯವರು ಒಂದಾದರೂ ಸಿನಿಮಾ ಚಿತ್ರ ನೋಡಿಲ್ಲವಂತೆ.

ಲಿಸ್ಬನ್ನಿನ ಮಾಟಗಾರ ನೂರ್ ಲೊರಿಯಷ ಪೆರೇರಾ ದಸ್ತಗಿರಿ ಮಾಡಲ್ಪಟ್ಟನು. ತನ್ನ ಜೊತೆಯಲ್ಲಿ ತನ್ನ ಗೂಬೆಯನ್ನೂ ಬಂದೀಖಾನೆಗೆ ಕರೆದುಕೊಂಡು ಹೋದನು

ಮಾಜಿ ರೈಲ್ವೆ ಕೆಲಸಗಾರನೊಬ್ಬನು ಆಸ್ಟ್ರೇಲಿಯಾದ ಮುಂದಿನ ಗೌರ್ನರ್ ಜನರಲ್ ಪದವಿ ಪಡೆಯಲು ಓದ್ದಾಡುತ್ತಿದ್ದಾನೆ. ಅವನಿಗೆ 72 ವರ್ಷ ವಯಸ್ಸು, ಒಂದು ಕಾಲಿಲ್ಲ, 3 ಯುದ್ಧಗಳನ್ನು ಬಲ್ಲ.

ಲಂಡನ್ ಜ 20 — ಕಲ್ಕೋನಿಯಲ್ ಆಫೀಸಿನಿಂದ ಪ್ರಕಟವಾದ ವರದಿಯಲ್ಲಿ ಮಾಲ್ಟಾಕ್ಕೆ ಒಂದು ವಿಧದ ಸ್ವಾತಂತ್ರ್ಯ ಕೊಡುವ ವಿಚಾರವಿದೆ.

ಲಂಡನ್ ಜ 21 — ರಷ್ಯಾ ವಿಷಯದಲ್ಲಿ ಬ್ರಿಟನ್ನಿನ ರೀತಿ ನೀತಿಯು ಜಗತ್ತಿನ ಸ್ವಾಬಲಿನ್ನರಿಗೆ ಚಿಂತೆಯುಂಟುಮಾಡಿದೆಯೆಂದು ಲಾರ್ಡ್ ಮಾಂಟಿಗಮರಿಯವರು ಹೇಳಿದ್ದಾರೆ.

ಬೆಲ್‌ಗ್ರೇಡ್ ಜ 20—ಕಳುವು ಮತ್ತು ಕಾಳಸಂತೆ ವ್ಯಾಪಾರ ನಡೆಸುತ್ತಿದ್ದಕಾಗಿ ಇಲ್ಲಿಯ ನ್ಯಾಯಾಸ್ಥಾನದಲ್ಲಿ ವಿಚಾರಣೆಗೆ ಒಳಪಡಿಸಲಾಗಿದ್ದವರ ಪೈಕಿ 4 ಮಂದಿಗೆ ಮರಣ ದಂಡನೆಯೂ 16 ಮಂದಿಗೆ 3 ತಿಂಗಳಿಂದ 18 ವರ್ಷಗಳವರಿಗೂ ಸಜಾ ವಿಧಿಸಲಾಯಿತು

ಕರಾಚಿ ಜ 20 — ಜಾವಾದಿಂದ ಭಾರತಕ್ಕೆ ಮುಚ್ಚಿಕೊಂಡು ಒಬ್ಬ ಸಿಂಧ್ ವ್ಯಾಪಾರಿಯು ತಂದ 25000 ರೂ ಬೆಲೆಯ ಡಾಲರುಗಳನ್ನು ಕಸ್ಟಮ್ ಅಧಿಕಾರಿಗಳು ಪತ್ತೆ ಹಚ್ಚಿ ಪಶಪಡಿಸಿಕೊಂಡರು.

ಮುಸ್ಲಿಂ ಮಹಿಳೆಯರೊಂದಿಗೆ ಗಾಂಧೀಜಿಯವರ ಭಾವ ಚಿತ್ರ

—೦—

ಭಾಟಿಯಾಲಪುರವೆಂಬ ನೌಖಾಲಿಯ ಗ್ರಾಮಕ್ಕೆ ಗಾಂಧೀಜಿ ಸಂದರ್ಶನಪತ್ರಾಗ ಅಲ್ಲಿಯ ಒಂದು ಮುಸ್ಲೀಮ್ ವಸತಿಯನ್ನು ಸಂದರ್ಶಿಸಿದರು. ಆ ಮನೆಯ ಮುಹಿಳೆಯರು ಗಾಂಧೀಜಿಯವರ ದರ್ಶನ ಪಡೆಯಲು ಇಚ್ಚಿಸಿದರು. ಅವರು ಪರದಾ ಕ್ರಮ ಅನುಸರಿಸುತ್ತಿದ್ದ ದರಿಂದ ಗಾಂಧೀಜಿಯನ್ನು ಮನೆಯ ಹಿಂದಿನ ವಠಾರಕ್ಕೆ ಕರೆಸಿದರು. ಅಲ್ಲಿ ಅವರು ಗಾಂಧೀಜಿಯೊಡನೆ ನಿಂತು ಭಾವ ಚಿತ್ರ ತೆಗೆಯಲಪೇಕ್ಷಿಸಿದರು. ಕೂಡಲೇ ಓರ್ವ ಪೊಟೋ ಗ್ರಾಫರನ್ನು ಕರೆಸಲಾಯಿತು. ಮುಸ್ಲೀಮ್ ಮಹಿಳೆಯರೊಂದಿಗೆ ಗಾಂಧೀಜಿ ನಿಂತು ಒಂದು ಭಾವ ಚಿತ್ರವನ್ನೆತ್ತಲಾಯಿತು.

ವಿದ್ಯಾರ್ಥಿಗಳಿಗೆ ಸಾರಾಯಿ ಇಲ್ಲ

ಜನವರಿ 9 ನೇ ತಾರೀಖಿನಿಂದ ವಿದ್ಯಾರ್ಥಿಗಳಿಗೆ ಸಾರಾಯಿಯನ್ನು (ಸ್ವದೇಶಿಯಾಗಲೀ, ವಿದೇಶಿಯಾಗಲಿ) ಮಾರಕೂಡದೆಂದು ಪಂಜಾಬು ಸರಕಾರವು ಆರ್ಡರು ಮಾಡಿದೆ.

ಗಾಂಧೀಜಿ ಶಾಂತಿ ಯಾತ್ರೆಯ ಚಲನ ಚಿತ್ರ

ಮಹಾತ್ಮಜೀಯವರು ನೌಖಾಲಿ ಗ್ರಾಮಗಳಲ್ಲಿ ಕೈಗೊಂಡ ಮಹತ್ವಪೂರ್ಣ ಕಾಲ್ನಡಿಗೆಯ ಸಂಚಾರದ ಕುರಿತು ಇಂಫರ್ಮೇಷನ್ ಇಲಾಖೆಯ ಕಡೆಯಿಂದ ಚಲಚಿತ್ರವೆತ್ತುವ ಏರ್ಪಾಡು ಮಾಡಿದರೆ ಇದರಿಂದ ಜಾತೀಯ ಐಕ್ಯತೆಗೆ ಮತ್ತು ಪ್ರೇಮ ಸಂದೇಶದ ಪ್ರಚಾರಕ್ಕೆ ತುಂಬಾ ಸಹಾಯವಾದೀತು ಎಂಬಡಾಗಿ ಬನಾರಸ್ ಗಾಂಧೀ ಸಂಘದ ಅಧ್ಯಕ್ಷ ಶ್ರೀ ಎಂ. ಎಸ್. ಸುಂದರಂ ರವರು ಸರದಾರ್ ಪಟೇಲರೊಡನೆ ತಂತೀ ಮುಖೇನ ಬಿನ್ನವಿಸಿಕೊಂಡಿದ್ದಾರೆ,

ರಾ. ರ. ಸಭೆ

ದೆಲ್ಲಿಯ ರಾಜ್ಯಾಂಗ ರಚನಾ ಸಭೆಯಲ್ಲಿ ಪಂ|| ನೆಹರೂರವರು ತಂದಿದ್ದ ಸಭೆಯ ಗುರಿಯ ಸಂಬಂಧದ ಠರಾವು ಸರ್ವಾನುಮತದಿಂದ ಮಂಜೂರಾಯಿತು. ರಾಜ್ಯಾಂಗ ಸಭೆಯಲ್ಲಿ ಭಾಷಾವಾರು ಪ್ರಾಂತ್ಯ ರಚನೆ ಬಗ್ಗೆಯೂ ಸಭೆಯು ಸದಸ್ಯ ಕೆಲಸಗಾರರ ಸಂಬಳ ತಗ್ಗಿಸುಲು ನಿರ್ಣಯ ಬರಲಿರುವುದು.

ರಷ್ಯಾ ಜನ ಸಂಖ್ಯೆ

ಯುದ್ಧ ವರ್ಷಗಳಲ್ಲಿಗಿಂತ ಎರಡರ್ ಷ್ಟಾಗುತ್ತಿದೆ ರಷ್ಯಾ ಜನ ಸಂಖ್ಯೆ.

ಸುಖ ಆರೋಗ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸೇರು ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಔತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸ

ತಾ॥ 27-1-47 ॥ಶ್ರೀ॥ ಸಂ. 20

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ– ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇಗಾರತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವನೊಗ್ಗ ಜಿಲ್ಲಾ

ಅಖಿಲ ಭಾರತ ಧರ್ಮ ಸಂಘ

(ಸ್ವಂ. ಸು. ತಂತಿ)

ಬೊಂಬಾಯಿ ಜ 21 — ಅಖಿಲ ಭಾರತ ಧರ್ಮ ಸಂಘದ 6 ನೇ ಅಧಿವೇಶನವು ಶನಿವಾರ ಇಲ್ಲಿ ನಿರ್ಮಿಸಲಾಗಿರುವ ಧರ್ಮ ನಗರದ ಭಾರಿ ಚಪ್ಪರದಲ್ಲಿ ಪ್ರಾರಂಭವಾಯಿತು. ದ್ವಾರಕಾ ಶಾರದಾ ಪೀಠದ ಶ್ರೀ ಅಭಿನವ ಸಚ್ಚಿದಾನಂದ ತೀರ್ಥ ಜಗದ್ಗುರು ಶಂಕರಾಚಾರ್ಯಸ್ವಾಮಿಗಳೂ ಮತ್ತು ಅನೇಕ ಹಿಂದೂ ಮತೀಯ ಮುಖಂಡರೂ ಸಭೆಯನ್ನು ಅಲಂಕರಿಸಿದ್ದರು. ಜೋತಿರ್ಪೀಠದ ಶಂಕರಾಚಾರ್ಯರವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಹೊಸ ಅಧ್ಯಕ್ಷರಿಗೆ ನಿವೃತ್ತ ಅಧ್ಯಕ್ಷರಾದ ಶ್ರೀ ದ್ವಾರಕಾ ಜಗದ್ಗುರುಗಳವರು ಅಧ್ಯಕ್ಷಾಧಿಕಾರವನ್ನು ವಹಿಸಿಕೊಟ್ಟರು. ಇಬ್ಬರು ಅಧ್ಯಕ್ಷರ ಭಾಷಣಾನಂತರ ಶ್ರೀ ಕರಪಾತ್ರಿ ಸ್ವಾಮಿಗಳು ಸ್ಫೂರ್ತಿದಾಯಕ ಭಾಷಣ ಮಾಡಿದರು. ಭಾನುವಾರ ಸಂಜೆ ಸಭೆ ಮತ್ತೆ ನಡೆದು ಹಲವು ಪ್ರಮುಖ ಠರಾವುಗಳು ಮಂಜೂರಾದವು ಹಲವು ವಿದ್ವಾಂಸರು ಮಾತನಾಡಿದರು.

ಶ್ರೀ ದ್ವಾರಕಾ ಶಾರದಾ ಪೀಠಾಧ್ಯಕ್ಷರ ಮತ್ತು ಶ್ರೀ ಕರಪಾತ್ರಿ ಮಹಾರಾಜರವರ ಆಶೀರ್ವಾದ ಪೂರ್ವಕವಾದ ಭಾಷಣಸಂತರ ಅಧಿವೇಶನವು ಪರಸ ಮಾಪ್ತಿಗೊಂಡಿತು.

ರಾಜ್ಯಾಂಗ ಸಮ್ಮೇಳನವು ಶ್ರೀ ದ್ವಾರಕಾ ಶಾರದಾ ಪೀಠದ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಸಂಗೀತ ವಿದ್ವಾನ್ ಮಾಸ್ಟರ್ ವಸಂತರವರಿಂದ ವಂದೇ ಗೀತೆಯು ಹಾಡಲ್ಪಟ್ಟಿತು. ಅಧ್ಯಕ್ಷರು ದೀರ್ಘವಾದ ಭಾಷಣದಲ್ಲಿ ತಾತ್ಕಾಲಿಕ ರಾಜ್ಯಾಡಳಿತದಲ್ಲಿ ಸನಾತನ ಸಂಘದ ಸ್ಥಿತಿಗತಿಗಳನ್ನು ವಿವರಿಸಿ ರಾಜ್ಯಾಂಗದಲ್ಲಿ ಸನಾತನ ಪ್ರಾತಿನಿಧ್ಯವ ಅವಶ್ಯಕತೆಯನ್ನು ತಿಳಿಸಿದರು. ॥ ದೂಕರ್ಕಾಲರು ಹೃದಯಂಗಮ ಭಾಷಣ ಮಾಡಿದರು. ಕೆಲವು ಅಗತ್ಯ ನಿರ್ಣಯಗಳು ಮಂಜೂರಾದ ನಂತರ ಶ್ರೀ ದ್ವಾರಕಾ ಶಂಕರಾಚಾರ್ಯ ಸ್ವಾಮಿಗಳವರೂ, ಶ್ರೀ ಕರಪಾತ್ರಿ ಮಹಾರಾಜರವರೂ ಆಶೀರ್ವಚನ ಪೂರ್ವಕವಾಡ ಭಾಷಣಗಳನ್ನು ಮಾಡಿದ ನಂತರ ಸಮ್ಮೇಳನವು ಮುಕ್ತಾಯ

ಶ್ರೀ ಶಿವಪೂಜೆ

(ಸನ್ಮಾರ್ಗ)

ಪುರಾಣಕಾಲದ ಯುಗ. ದಕ್ಷಕನ್ಯೆಯು ದಕ್ಷಯಜ್ಞದಲ್ಲಿ ತಂದೆಯು ಸೇಡು ತೀರಿಸಿಕೊಂಡು ಹಿಮಾಚಲಗೃಹದಲ್ಲಿ ಪಾರ್ವತಿನಾವಿಂದ ಉತ್ಪನ್ನಳಾಗಿ ಶಿವನನ್ನು ವರರೂಪದಲ್ಲಿ ಪಡೆಯುವ ಸಲುವಾಗಿ ಕಠೋರವಾದ ತಪಸ್ಸಿನಲ್ಲಿ ನಿರತಳಾಗಿದ್ದಳು. ಆ ದಿನದಿಂದ ತಂದೆಯು ಹೂದೋಟದಲ್ಲಿ ನಿರ್ಮಿತವಾದ ಶಿವಾಲಯದಲ್ಲಿ ನಿಯಮದಿಂದ ಶಿವಪೂಜೆ ಮಾಡುವುದು ಪುತ್ರಿಯ ನಿತ್ಯಕ್ರಿಯೆಯಾಗಿ ಹೋಗಿದ್ದಿತು. ಪೂಜೆಯ ನೇಳೆ ಆಕೆ ವಿಜಯೆ ಮತ್ತು ತರಂಗಿಣಿಯರೆಂಬ ತನ್ನ ಕೆಳದಿಯರನ್ನೂ ಜತೆಗೆ ಕರೆದೊಯ್ಯುತ್ತಿದ್ದಳು.

ಅದೊಂದು ದಿವಸ ಆಕೆ ಪೂಜೆಗೆ ಹೋಗುತ್ತಾ ಇದ್ದಾಗ ಹೂದೋಟದ ಹಾದಿಯಲ್ಲಿಯೇ ಏಳು ವರ್ಷದ ವಟು ಮೊಬ್ಬನು ಕಂಗೊಳಿಸಿದನು. ಆತ ಹಣೆಯಲ್ಲಿ ಬಿಳಿಯ ಭಸ್ಮದ ತ್ರಿಪುಂಡ್ರವನ್ನು ಧರಿಸಿದ್ದನು. ನಡುವಿನಲೊಂದು ಕೌಪೀನವನ್ನುಟ್ಟಿದ್ದನು. ಹುಲಿದೊಗಲಿನಿಂದ ಮೈ ಮುಚ್ಚಿಕೊಂಡು ಬಿಗರೆದೊಗಲಿನ ಆಸನವೊಂದನ್ನು ಕಂಕುಳಲ್ಲಿಟ್ಟುಕೊಂಡು ಒಲಗಯ್ಯಲ್ಲಿ ಕಮಂಡಲವನ್ನು ಹಿಡಿದಿದ್ದನಾತ ಈ ಬಗೆಯ ದಿವ್ಯರೂಪಧಾರಿಯಾದ ವಟುವನ್ನು ನೋಡಿದೊಡನೆ ಪಾರ್ವತಿಯೂ ಆಕೆಯ ಸಖಿಯರೂ ಸ್ತಬ್ಧರಾದರು. ಆ ಉಗ್ರತೇಜಸ್ಸನ್ನಿಸಿದರು ಕಣ್ಣುಂಬ ನೋಡಲೂ ಆಗಲಿಲ್ಲ ಅವರಿಗೆ ಯಾರೀ ವಟು! ಈ ಉದ್ಯಾನದೊಳಗೆ ಹೇಗೆ, ಎತ್ತಲ್ಲಿಂದ ಬಂದನು? ಮುಂತಾದ ವಿಚಾರಗಳು ಆ ಮೂವರ ಹೃದಯವನ್ನು ತೂಗಾಡಿಸ ತೊಡಗಿದುವು.

ಕ್ಷಣಹೊತ್ತಿನ ಬಳಿಕ – 'ವಿಜಯೆ! ಕೇಳಬಾರದೆ ವಟುವನ್ನು? ಯಾರು? ಎಲ್ಲಿ ಇರುವವನು? ಇಲ್ಲಿಗೇತಕ್ಕೆ ಬಂದಿದ್ದಾನೆ?' ಎಂದು ಪಾರ್ವತಿ ವಿಜಯೆಗೆಂದಳು.

ವಿಜಯೆ ಅತನನ್ನು ಪ್ರಶ್ನಿಸುವ ಮೊದಲೇ ಆ ವಟುವು ಇವರ ಇನ್ನೂ ಸಮೀಪಕ್ಕೆ ಬಂದುಬಿಟ್ಟನು ವಿಜಯೆಗೆ ವಟುವಿನ ಆಶಿಷ್ಟ ವ್ಯವಹಾರವು ಸರಿದೋರಲಿಲ್ಲ. ತೀಕ್ಷ್ಣಸ್ವರದಲ್ಲಿ ವಟುವನ್ನು ಕೇಳಿದಳಾಕೆ – 'ಯಾರು ನೀನು? ನಿವಾಸವೆಲ್ಲಿ? ಇಲ್ಲಿಗೇಕೆ ಬಂದಿರುವೆ?'

ವಟುವು ಸ್ಮಿತಹಾಸ್ಯದೊಂದಿಗೆ ಉತ್ತರಿತ್ತ – 'ನಾನು ವಟು. ಕೈಲಾಸವೆ ನನ್ನ ನಿವಾಸಸ್ಥಳ. ಹೀಗೆಯೇ ಹೊರಟು ಬಂದೆನು'

ವಿಜೆಯೆ — ಇದು ಹಿಂದೂಲಯರಾಜಧಾನಿ. ಇಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಪ್ರಹರಿಯ ಅಪ್ಪಣತಿ ಪಡೆದೇ ಪ್ರವೇಶಿಸುತ್ತಾನೆ, ನೀನು ಹೇಗೆ ಬಂದೆ?'

ವಟುವು ಗಂಭೀರತೆಯಿಂದ ಮರುನುಡಿದ —' ಏನು? ಪ್ರತಿಯೊಬ್ಬ ವ್ಯಕ್ತಿ ಪ್ರಹರಿಯ ಅಜ್ಞೆಯಿಂದ ಪ್ರವೇಶಿಸುವನೆ? ಇಲ್ಲದಿದ್ದರಿಲ್ಲವೇ?.

ವಿಜಯೆ — 'ಹಾಗೆಯೇ ಸರಿ!'

ವಟು — ಇದೇ ನೋಡು ಭ್ರಾಂತಿ ಮಿಥ್ಯಾವಾದ. ಬೇಸಿಗೆಯ ಕಾಡುಬಿಸಿಲಿನ ಹಾಗೂ ವಾಯುವಿನ ಭೀಷಣ ವೇಗವನ್ನು ಪ್ರಹರಿಗಳು ತಡೆಯುತ್ತಿರಬಹುದಲ್ಲವೆ? ಮಳೆಯ ಮುಗಿಲನ್ನು ಕಯ್ಯೆತ್ತಿ ತಡೆದು ಸುರಿಯುವುದನ್ನು ನಿಲ್ಲಿಸಬಹುದು, ಅದೇಪ್ರಕಾರ ವಸಂತನು ಕಲಕೆಯೊಂದಿಗೆ ಕೇಳಿಯಾಡುತ್ತಿರುವುದನ್ನು ನೋಡಿ ಆತನನ್ನು ಸೆರೆ ಹಿಡಿಯುತ್ತಿರಬಹುದು, ಅಲ್ಲವೇ?'

ವಿಜಯೆ — ವಿಶೇಷ ತರ್ಕಕ್ಕೆ ನಮ್ಮ ಬಳಿಯಲ್ಲಿ ಸಮಯವಿಲ್ಲ ಎತ್ತ ಹೋಗಬೇಕಿತ್ತು? ಎತ್ತ ನಡೆದು ಬಂದೆ? ನಿಶ್ಚಯವನ್ನೇನೂ ಮರೆಯಲಿಲ್ಲ ತಾನೆ?'

ವಟು — 'ನಿಶ್ಚಯವು. ಉದ್ಯಾನನೋಡಲಿಕ್ಕಿತ್ತು, ಮತ್ತು ....'

ವಿಜಯೆ — 'ಸರಿ! ನೋಡಿಯಾಯಿತಲ್ಲವೇ ಉದ್ಯಾನವನ್ನು? ಇನ್ನು ಹಿಂದಿರುಗು.

ವಟು — 'ಹಿಂದಿರುಗುವೆ ಕೇವಲ ಒಂದು ಪ್ರಶ್ನೆಗೆ ಉತ್ತರ ಪಡೆದು'

ವಿಜಯೆ — ಯುವತಿಯರೊಂದಿಗೆ ಪ್ರಶ್ನಿಸುವುದು ವಟುವಿನ ಕರ್ತವ್ಯವಲ್ಲ. ನೀನು ಈಗಲೇ ಹೂದೋಟದಿಂದ ಹೊರಡೆ.'

ಪಾರ್ವತಿಗೆ ವಿಜಯೆಯ ಈ ವ್ಯವಹಾರವು ಅವಶ್ಯಕತೆಗಿಂತ ಹೆಚ್ಚು ಕಠೋರವಾಗಿ ತೋರಿತು. ಆಕೆ ವಿನಮ್ರ ಸ್ವರದಿಂದ ವಿಜಯೆಗೆಂದಳು— 'ವಿಜಯೆ! ಹಾಗೆ ಹೇಳಬಾರದು ನೋಡಬಾರದೇ ಈ ವಟುವು ನೋಡಲು ಎಷ್ಟು ಸಾಧುವಾಗಿದ್ದಾನೆ.

ಪಾರ್ವತಿಯ ಈ ನುಡಿಯು ವಟುವಿನ ಸಾಹಸವನ್ನು ವೃದ್ಧಿಗೊಳಿಸಿತು. ಅವನು ಈಗ ನೆಟ್ಟಿಗೆ ಪಾರ್ವತಿಯ ಒಳಿಗೆ ಬಂದು ಹೇಳಿದ — 'ಗಿರಿನಂದಿನೀ! ಸರಿಯಾಗಿಯೇ ನುಡಿದೆ ಇನ್ನು ನಾನು ನಿನ್ನನ್ನು ಪ್ರಶ್ನೆ ಕೇಳಬಹುದೇ?

'ಕೇಳಬಹುದು' — ಲಜ್ಜೆ ಹಾಗೂ ಸಂಕೋಚದೊಂದಿಗೆ ಗಿರಿತನಯೆಯೆಂದಳು.

'ಈ ವನಮಂದಿರ ಯಾರದ್ದು?'

'ಶಿವನದು'

'ಇಲ್ಲಿ ಯಾರಾದರೂ ಪೂಜೆ ಮಾಡುವರೆ?

'ಹೌದು ನಾನೇ ಮಾಡುವೆ'

'ಆಕ್ಷೇಪವಿಲ್ಲವಾದರೆ ಇಷ್ಟನ್ನು ತಿಳಿಸುವ ದಯೆದೊರುವೆಯಾ — ನಿನ್ನ ಹೆಸರು ಅಕ್ಷರ ಮೂಲಿಕೆಯು ಯಾವ ಅಕ್ಷರಗಳಿಂದ ಸುಶೋಭಿಸಿತ್ತಿದೆ?'

'ಪರ್ವತ ಕನ್ಯೆಯ ಹೆಸರು ಪಾರ್ವತಿಯಲ್ಲದೆ ಬೇರೇನಿದ್ದೀತು?'

'ಏನು? ಪಾರ್ವತಿಯೆ?'

'ಹೌದು ಹಾಗೆಯೇ'

'ಹಾಗಾದ್ದರೆ ನಸ್ತ್ ದಿನ್ನೊಂದು ಪ್ರಶ್ನೆಯಿದೆ ನಿನ್ನೊಂದಿಗೆ'

'ಏನದು'

'ನಿನ್ನ ವಿವಾಹವು ಕೈಲಾಸಾಧಿಪತಿಯಾದ ಶಂಕರನೊಟ್ಟಿಗೆ ಜರುಗಲಿದೆಯೆಂದು ಕೇಳಿದೆ. ನಿಜವೇ ಇದು?

'ಸೂರ್ಯ ಪ್ರಕಾಶದಷ್ಟೇ ಸತ್ಯ'

'ಆದರೆ ಶಿವನೊಟ್ಟಿಗೆ ವಿವಾಹನೂಡಿಕೊಂಡಲ್ಲಿ ....'

[ಮುಂದಿನ ಸೋಮವಾರದ ಸಂಚಿಕೆ ನೋಡಿ]

ರಾಜ್ಯಾಂಗ ಸಮ್ಮೇಳನ ನಡೆದ ನಂತರ ಧರ್ಮಸಂಘದ ಅಧಿವೇಶನ ಪ್ರಾರಂಭವಾಯಿತು. ಭಾರತದ ಅನೇಕ ಕಡೆಗಳಿಂದ ಬಂದಿರುವ ನಾಯಕರು ವೀರಾವೇಶ ಭಾಷಣ ಮಾಡಿದರು. ಕೆಲ ಮುಖ್ಯ ಠರಾವುಗಳು ಮಂಜೂರಾದವು.

—o—

ವರ್ತಮಾನ ಸಂಗ್ರಹ

ರಾಮೇಶ್ವರಕ್ಕೆ ಕಳೆದ ಮಂಗಳವಾ
ಮದರಾಸು ವ್ಯವಸಾಯ ಮಂತ್ರಿ
ಶ್ರೀ ಕುಮಾರಸ್ವಾಮಿರಾಜರು ಬಂದಾ
ದೇವಸ್ಥಾನದ ಧರ್ಮದರ್ಶಿಗಳು ಅ
ರನ್ನು ಸ್ವಾಗತಿಸಿದರು. ಪೂಜಾಜನ
ಇಚ್ಛೆಯನ್ನೂ ಸರಕಾರದ ನೀತಿಯ
ನ್ನೂ ಅನುಸರಿಸಿ ಈ ದೇವಸ್ಥಾನವನ್ನು
ರಿಜನರ ಪ್ರವೇಶಕ್ಕೆ ಅವಕಾಶ ಕೊ
ಬೇಕೆಂದರು.

ಸೇಲಂ — ಕಳೆದ ಅಕ್ಟೋಬರ್‌ನಲ್ಲಿ
ಡೆದ ಗಾಂಧಿ ಜಯಂತಿ ಸಂಬಂಧದಲ್ಲಿ
ಪೋಲೀಸರು ಗುಂಡುಹಾರಿಸಿದಾಗ ಮ
ದ ದಸ್ತಗೀರ್ ಸಾಹೇಬರ ಪತ್ನಿಗೆ ಕಳೆ
ಶುಕ್ರವಾರ ನಡೆದ ವಿಾಟಂಗಿನಲ್ಲಿ
ರೂ 647-13-0 ನಿಧಿ ಅರ್ಪಿಸಲಾಯಿ
ತು.

ಬೆಂಗಳೂರು ಜ 23— ಕಲ್ಕತ್ತಾದ
ವಿದ್ಯಾರ್ಥಿಗಳ ಮೇಲೆ ನಡೆದ ಗೋ
ಬಾರು ಪ್ರಕರಣವನ್ನು ಖಂಡಿಸುವು
ಕ್ಕಾಗಿ ಇಲ್ಲಿಯ ವಿದ್ಯಾರ್ಥಿಗಳು ಹರ
ತಾಳವನ್ನಾಚರಿಸಿದರು.

ವೆಲ್ಲೂರು — ಇಲ್ಲಿಯ ಮಾರ್ಕೆ
ಟ್‌ನಲ್ಲಿಯ ಅಂಗಡಿಗಳ ಬಾಡಿಗೆ ಹೆಚ್ಚಿ
ಸಲು ಮುನಿಸಿಪಾಲಿಟಿಯವರು ನಿರ್ಧರಿ
ಸಿರುವರು.

ಮದರಾಸು ಜ 22 — ರಸ್ತೆಯಲ್ಲಿ
ಅಸ್ಪೃಶ್ಯರ ಘೋಷಣೆ ಬರೆಯುತ್ತಿದ್ದ ಇ
ಬ್ಬರು ಹುಡುಗರಿಗೆ ತಲಾ 5 ರೂ ಜು
ಲ್ಮಾನೆ ವಿಧಿಸಲಾಗಿದೆ.

ಮದರಾಸು ಜ 21 — ವ್ಯಭಿಚಾರ
ಗೃಹ ನಡೆಸುತ್ತಿದ್ದ ಆಪಾದನೆ ಮೇಲೆ
ಶ್ರೀ ವಿಜಲಕ್ಷ್ಮಿ ಎಂಬುವಳಿಗೆ ರೂ. 500
ಜುಲ್ಮಾನೆ ವಿಧಿಸಲಾಗಿದೆ.

ಬೆಂಗಳೂರು ಜ 23 — ರಾಜಕೀಯ
ಅಪಾದನೆಗೆ ಗುರಿಯಾದ ಕಾಂಗ್ರೆಸ್
ಕಾರ್ಯಕರ್ತರಾದ ಶ್ರೀ ಹನುಮಂತಯ್ಯನವರ
ಎ ಅ ॥ ಜಿ ॥ ಮ್ಯಾಜಿಸ್ಟ್ರೇಟರು 15
ದಿನಗಳ ಕಠಿಣ ಸಜೆಯನ್ನೂ 500 ರೂ
ಜುಲ್ಮಾನೆಯನ್ನೂ ವಿಧಿಸಿದರು.

ರಂಗೂನ್ ಜ 23 — ದಂಗೆಗೆ ಸರಿಸ
ಮನವೆಂದು ಹೇಳಬಹುದಾದ ಡೆಕಾ
ಯಿತಿ ಮತ್ತು ಪುಂಡುತನ ನಡೆಸಿದ ಡ
ಜನ ಇತರ ಗುಂಪಿಗೂ ಪೋಲೀಸು ವಿ
ರುದ್ಧ ಪಡೆಗಳಿಗೂ ಭಾರಿ ಕದನ ನಡೆ
ದು 12 ಮಂದಿ ಡಕಾಯಿತರು ಸತ್ತರು.

ಲಾಹೋರು ಜ 24 — ವಜೀರಾ
ನಿಸ್ತಾನಕ್ಕೆ ಸ್ವಾತಂತ್ರ್ಯ ಬೇಕೆಂದು ಕೇ
ಳುವುದಾಗಿ ತಿಳಿಯಬಂದಿದೆ.

ಲೀಗ್ ಮುಖಂಡರ ದಸ್ತಗಿರಿ

ಲಾಹೋರು ಜ 24 — ಮುಸ್ಲಿಂ ನ್ಯಾಷನಲ್ ಗಾರ್ಡ್ ನ್ಯಾಯಬಾಹಿರ ಸಂಸ್ಥೆಯೆಂದು ಸಾರಲಾದ ನಂತರ ಲೀಗ್ ಮುಖಂಡರೂ ವೈಸರಾಯಿ ಕೌನ್ಸಿಲ್ಲಿನ ಮಾಜಿ ಸದಸ್ಯರೂ ಆದ ಮಿ॥ ಫಿರೋಜ್ ಖಾನ್ ನೂನರು ಕಾರ್ಯಲಯವು ಸಂಶೋಧನೆಗೆ ಅಡ್ಡ ಪಡಿಸಿದ್ದರಿಂದ ದಸ್ತಗಿರಿ ಮಾಡಲ್ಪಟ್ಟಿದ್ದಾರೆ. ಬೇಗಂ ಷಾನವಾಜ್ ಸರ್ದಾರ್ ಷೌತ್ ಹಯಾತ ಖಾನರೂ ದಸ್ತಗಿರಿ ಮಾಡಲ್ಪಟ್ಟಿದ್ದಾರೆ ಇನ್ನು ಕೆಲ ಲೀಗು ಮುಖಂಡರ ದಸ್ತಗಿರಿಯಾಗಿದೆ. ನ್ಯಾಷನಲ್ ಗಾರ್ಡ್ ಕಾರ್ಯಾಲಯವನ್ನು ಪೋಲೀಸಿನವರು ತನಿಖೆ ಮಾಡಿ ಸಾವಿರ ಉಕ್ಕಿನ ಶಿರಸ್ತ್ರಾಣಗಳನ್ನು ಹಿಡಿದಿರುವರೆಂದು ಹೇಳಲಾಗಿದೆ.

ಬೊಂಬಾಯಿ ಜ 24 — ನಿನ್ನೆ ಗಲಭೆ ಸಂಬಂಧದಲ್ಲಿ ಪೋಲೀಸು 118 ಸುತ್ತು ಗುಂಡು ಹಾರಿಸಿದರೆಂದೂ ಇಬ್ಬರು ಮಡಿದರೆಂದೂ ತಿಳಿಯಬಂದಿದೆ. ಗುರುವಾರ 45 ದಸ್ತಗಿರಿಗಳಾದವು.

ಸೈದಾಪೇಟೆ ಜ 24 — ಆಲಂದೂರಿನ ಇಬ್ಬರು ದಿನಸಿ ಅಂಗಡಿಯವರು ಕೊಬ್ಬರಿ ಎಣ್ಣೆಗೆ ಶೇಕಡಾ 85 ರಷ್ಟು ಕಡ್ಲೆಕಾಯಿಣ್ಣೆ ಎಸ್ರಮಾಡಿ ಮಾರಿದ್ದಕ್ಕೆ ತಲಾ ರೂ. 100 ಜುಲ್ಮಾನೆ ವಿಧಿಸಲಾಯಿತು.

ನಾಂಕಿಂಗ್ ಜ 23 — ಜೈನಾದಲ್ಲಿ ಹೊಡೆದಾಟ ನಡೆಯುತ್ತಿದೆ. ಕಮ್ಯೂನಿಸ್ಟರು 2 ಪಟ್ಟಣ ವಶಪಡಿಸಿಕೊಂಡರು.

॥ವಂದೇಮಾತರಂ॥
ಶ್ರೇಷ್ಠವಾದ
ರಾಜಪುರಿ ಹೊಗೇಸೊಪ್ಪಿನಿಂದ
— ತಯಾರಿಸಲ್ಪಟ್ಟ —
ಕಾಂಗ್ರೆಸ್
(ರಿಜಿಸ್ಟರ್ಡ್)
ಮಂಗಳೂರು
ಬೀಡಿಗಳು
ಜೆ. ಎಸ್. ಟೊಬ್ಯಾಕೊ ವರ್ಕ್ಸ್
ಬಸ್ ಟರ್ಮಿನಸ್, ಮೈಸೂರು.

ಕನ್ನಡನಾಡಿನ ಪ್ರಖ್ಯಾತ ನಟನಟಿಯರ ಅಭಿನಯಿಸಿರುವ
ಮಹಾತ್ಮಾರವರ ಅಮೋಘ ಕನ್ನಡ ಚಿತ್ರ
ಕೃಷ್ಣಲೀಲಾ
14—2—47 ರಲ್ಲಿ ಪ್ರಾರಂಭ
ಮೈಸೂರು ರಾಜ್ ಕಮಲ್‌ನಲ್ಲಿ
ಬೆಂಗಳೂರು. ಸ್ವಾಸ್ತಿಕ್, ಶಾರದಾ
ಮತ್ತು ಕರ್ನಾಟಕದ ಪ್ರಮುಖ ಪಟ್ಟಣಗಳಲ್ಲಿ.
ಹಂಚಿಕೆ— ಮಹಾತ್ಮಾ ಪಿಕ್ಚರ್ಸ್,
165 ಗಾಂಧಿನಗರ, ಬೆಂಗಳೂರು ಸಿಟಿ
Vijaya Agencies, Mysore

ಶಕ್ತಿ ಸುಧಾ
ಸೇವಿಸಿ
ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ
ನಿಸ್ಸಾರವಾದ, ನಶಿಸಿರುವ ದೇಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ
ಅದ್ವಿತೀಯವಾದುದು.
ವಿಳಾಸ — ಶಕ್ತಿ ಸುಧಾ, 1067 ಚಾಮರಾಜಪುರಂ, ಮೈಸೂರು

At Ranjit—— 2nd Glorious Week
BANSARI
ಚಾರ್ಲಿ, ಈಶ್ವರ್‌ಲಾಲ್, ಷಮಿಾಂ, ದೀಕ್ಷಿತ್, ಕೇಸರಿ ಪಾತ್ರವಹಿಸಿರುವ
ಬನ್ನರಿ (ಹಿಂದಿ)
At Opera — From 24—I—47
JUNGLE GODESS
— Starring —
Noah Berry — Dorothy Short — Fredric Mackaya
Daily 3 Shows

Edited, Printed and Published by M. S Krishna Rao at the Satyavadi Press ChamarajAgrahar; Mysore.

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಸೋಮವಾರದ ಸಂಚಿಕೆ
ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-